**ಸಿವಿಲ್ ನ್ಯಾಯಾಧೀಶರು ಮತ್ತು  ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಫಜಲಪೂರ.**

**ಸಿ.ಸಿ.ನಂ.205/2019**

ಸರಕಾರದ ಪರವಾಗಿಃ  ಅಫಜಲಪೂರ ಪೊಲೀಸ್ ಠಾಣೆ

-:ವಿರುದ್ದ:-

ಆರೋಪಿ/ತರುಃ   ಗಣಪತಿ ತಂದೆ ಬಸಣ್ಣ ಕಂಠೋಳಿ,
59 ವರ್ಷ, ಉಃಕೂಲಿ ಕೆಲಸ,
ವಾಸಃ ಮಲ್ಲಾಬಾದ ಗ್ರಾಮ,
ತಾಃ ಅಫಜಲಪೂರ, ಜಿಃ ಕಲಬುರಗಿ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ  313 ರ ಪ್ರಕಾರ ಆರೋಪಿತನ ಹೇಳಿಕೆಗಳು**

ಪ್ರಃ1:  ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ 2  ಪ್ರಾಸಾ-01 ಯಲಗೊಂಡ ತಂದೆ ಯಮುನಪ್ಪ ಪಿ.ಸಿ.-586, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 05.07.2019 ರಂದು ನಾನು ಹಾಗೂ ನಮ್ಮ ಠಾಣಾ ಸಿಬ್ಬಂದಿ ಚಾಸಾ-4 ರವರು ಠಾಣೆಯಲ್ಲಿದ್ದಾಗ ಚಾಸಾ-1 ರವರು ತಮ್ಮನ್ನು ಕರೆದು ಮಲ್ಲಬಾದ ಗ್ರಾಮದ ವಿಜಯಲಕ್ಷ್ಮೀ ದೇವಸ್ಥಾನದ ಮುಂದುಗಡೆ ಸಾರ್ವಜನಿಕ ಸ್ಥಳದಲ್ಲಿ ಸದರಿ ಆರೋಪಿತನು ನಿಂತುಕೊಂಡು ಹೋಗಿ-ಬರುವ ಜನರಿಗೆ 01/- ರೂಪಾಯಿಗೆ 80/- ರೂಪಾಯಿ ಗೆಲ್ಲಿರಿ ಅಂತಾ ಜನರ ಮನವಲಿಸಿ ಅವರಿಂದ ಹಣ ತೆಗೆದುಕೊಂಡು ಅವರಿಗೆ ಮಟಕಾ ಚೀಟಿಯ ಅಂಕಿಗಳನ್ನು ಬರೆದುಕೊಟ್ಟು ನಂತರ ಫಲಿತಾಂಶ ತಿಳಿಸುತ್ತೇನೆ ಎಂದು ಚಾಸಾ-1 ರವರಿಗೆ ತಿಳಿಸಿದ್ದು, ಆ ನಂತರ ಚಾಸಾ-1 ರವರು ಪಂಚರನ್ನು  ಕರೆಯಿಸಿ ದಾಳಿಯ ವಿಷಯವನ್ನು ತಿಳಿಸಿ, ಆ ನಂತರ ಸದರಿಯವರು ಪಂಚರಾಗಲು ಒಪ್ಪಿಕೊಂಡ ನಂತರ ಚಾಸಾ-1 ರವರು ತನ್ನನ್ನು ಹಾಗೂ ಪಂಚರನ್ನು ತಮ್ಮ ಠಾಣೆಯ ಪೋಲಿಸ ವಾಹವನ್ನು ತೆಗೆದುಕೊಂಡು 11.35 ಗಂಟೆ ಸುಮಾರಿಗೆ ಮಲ್ಲಾಬಾದ ಬಸ್ಸ ನಿಲ್ದಾಣದ ಹತ್ತಿರ ತಮ್ಮ ವಾಹವನ್ನು ನಿಲ್ಲಿಸಿ ವಿಜಯಲಕ್ಷ್ಮೀ ದೇವಸ್ಥಾನದ ಹತ್ತಿರ ನಡೆದುಕೊಂಡು ಹೋಗಿ ದೇವಸ್ಥಾನದ ಮರೆಗೆ ನಿಂತು ನೋಡಲಾಗಿ ಸದರಿ ಆರೋಪಿತನು ದೇವಸ್ಥಾನದ ಮುಂದುಗಡೆ ಸಾರ್ವಜನಿಕ ರಸ್ತೆಯಲ್ಲಿ ನಿಂತುಕೊಂಡು ಹೋಗಿ-ಬರುವ ಜನರಿಗೆ ಇದು ಕಲ್ಯಾಣ ಮಟಕಾ 01/- ರೂಪಾಯಿಗೆ 80 ರೂಪಾಯಿ ಗೆಲ್ಲಿರಿ ಅಂತಾ ಮನವಲಿಸಿ ಮಟಕಾ ಚೀಟಿ ಬರೆದುಕೊಡುವುದು ಕಂಡು ಬಂದಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 3  ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ  ತಾವು ಸದರಿ ಆರೋಪಿತನನ್ನು  ನೋಡಿ ಆತನ ಮೇಲೆ ಪಂಚರ ಸಮಕ್ಷಮ ತಾವು ದಾಳಿ ಮಾಡಿದಾಗ ಸಮಯ 11.45 ಗಂಟೆ ಆಗಿತ್ತು,

ಚಾಸಾ-1 ರವರು ಸದರಿ ಆರೋಪಿತನ ಹೆಸರು ಮತ್ತು ವಿಳಾಸ ವಿಚಾರಿಸಿದಾಗ ಗಣಪತಿ ಬಸ್ಸಣ್ಣ ಕಂಟೋಳ್ಳಿ, ವಃ 51 ವರ್ಷ ಎಂದು ತಿಳಿಸಿರುತ್ತಾನೆಂದು ಹಾಗೂ ಸದರಿ ಆರೋಪಿತನನ್ನು ಚಾಸಾ-1 ರವರು ತಪಾಸಣೆ ಮಾಡಿದಾಗ ಸದರಿ ಆರೋಪಿತನ ಬಳಿ ರೂ.1020/- ನಗದು ಹಣ, ಒಂದು ಪೆನ್ನ ಮತ್ತು ಚೀಟಿಗಳು ದೊರಕಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 4 ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಚಾಸಾ-1 ರವರು ಪಂಚರ ಸಮಕ್ಷಮ 11.45 ರಿಂದ 12.45 ರ ವರೆಗೆ ಜಪ್ತಿ ಪಂಚನಾಮೆಯನ್ನು ಬರೆದುಕೊಂಡು, ಆ ನಂತರ ಮುದ್ದೇ ಮಾಲುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆಂದು ಹಾಗೂ ಸದರಿ ಆರೋಪಿತನನ್ನು ಮತ್ತು ದೊರೆತ ಮುದ್ದೇ ಮಾಲುಗಳನ್ನು ಠಾಣೆಗೆ ಕರೆದುಕೊಂಡು ಬಂದು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-6 ರವರಿಗೆ ವಹಿಸಿಕೊಟ್ಟಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 5 ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತಾನು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದು, ತನಗೆ ತೆರೆದ ನ್ಯಾಯಾಲಯದಲ್ಲಿ ಒಂದು ಕವರನಲ್ಲಿರುವ 100/- ರೂಪಾಯಿಗಳ ಮುಖ ಬೆಲೆಯ 9 ನೋಟುಗಳು ಮತ್ತು 50 ರೂಪಾಯಿಗಳ ಮುಖ ಬೆಲೆಯ 2 ನೋಟು ಮತ್ತು 20 ರೂಪಾಯಿಗಳ ಮುಖ ಬೆಲೆಯ 1 ನೋಟನ್ನು ತನಗೆ ತೋರಿಸಿದ್ದು, ತಾನು ಅವುಗಳನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಮತ್ತು ಕವರನಲ್ಲಿರುವ ಒಂದು ಮಟಕಾ ಚೀಟಿ ಮತ್ತು ಒಂದು ಪೆನ್ನನ್ನು ತನಗೆ ತೋರಿಸಿದ್ದು, ತಾನು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ-2 ಮತ್ತು ಮು.ಮಾ-3 ಎಂದು ಗುರುತಿಸಲಾಯಿತು ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 6 ಪ್ರಾಸಾ-03 ಮಂಜುನಾಥ ತಂದೆ ಗುರುನಾಥ ಹೂಗಾರ ಪೋಲಿಸ ನೀರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ 05.07.2019 ರಂದು ಬೆಳಗ್ಗೆ ಠಾಣೆಯಲ್ಲಿದ್ದಾಗ ಠಾಣಾ ವ್ಯಾಪ್ತಿಯ ಮಲ್ಲಾಬಾದ ಗ್ರಾಮದ ವಿಜಯಲಕ್ಷ್ಮೀ ದೇವಸ್ಥಾನದ ಹತ್ತಿರ ಅಕ್ರಮವಾಗಿ ಮಟಕಾ ಜೂಟಾಟ ಬರೆದುಕೊಳ್ಳುತ್ತಿರುವ ಬಗ್ಗೆ ಖಚಿತ ಬಾತ್ಮಿ ಬಂದ ಮೇರೆಗೆ ಠಾಣಾ ಸಿಬ್ಬಂದಿಗಳಾದ ಚಾಸಾ-4 ಮತ್ತು 5 ರವರನ್ನು ಮತ್ತು ಚಾಸಾ-2 ಮತ್ತು 3 ರವರನ್ನು ದಾಳಿಯ ಕುರಿತು ತಿಳಿಸಿ ಅವರಿಗೆ ಪಂಚರಾಗಲು ಕೇಳಿದ್ದು ಅವರು ಅದಕ್ಕೆ ಒಪ್ಪಿಕೊಂಡ ಮೇರೆಗೆ ತಾನು, ಠಾಣಾ ಸಿಬ್ಬಂದಿಗಳು ಮತ್ತು ಪಂಚರನ್ನು ಕರೆದುಕೊಂಡು ಮಲ್ಲಾಬಾದ ಗ್ರಾಮದ ವಿಜಯಲಕ್ಷ್ಮೀ ದೇವಸ್ಥಾನದ ಮರೆಗೆ ನಿಂತು ನೋಡಲಾಗಿ ಅಲ್ಲಿ ಸದರಿ ಆರೋಪಿತನು ಮಟಕಾ ಚೀಟಿ ಬರೆದು ಸಾರ್ವಜನಿಕರಿಂದ ಹಣ ಪಡೆಯುತ್ತಿರುವುದನ್ನು ಖಚಿತ ಪಡಿಸಿಕೊಂಡು ಸಿಬ್ಬಂದಿಯೊಂದಿಗೆ ಆ ವ್ಯಕ್ತಿಯ ಮೇಲೆ ದಾಳಿ ಮಾಡಿ ಆತನನ್ನು ಹಿಡಿದು ಪಂಚರ ಸಮಕ್ಷಮ ಆತನನ್ನು ಶೋಧನೆ ಮಾಡಿ ನೋಡಿದಾಗ ಮಟಕಾ ಚೀಟಿಗೆ ಸಂಬಂಧಿಸಿದ ರೂ.1,020/- ಮತ್ತು ಒಂದು ಪೇನ್

ಮತ್ತು ಮಟಕಾ ಚೀಟಿಗಳು ದೊರಕಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 7 ಪ್ರಾಸಾ-03 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆತನ ಹೆಸರು ವಿಚಾರಿಸಿದಾಗ ಆತನು ಗಣಪತಿ ಕಟೋಳಿ ಅಂತಾ ತಿಳಿಸಿದ್ದು, ತದ ನಂತರ ಆತನನ್ನು ವಿಚಾರಿಸಿದಾಗ ಮುಂಬೈ-ಕಲ್ಯಾಣ ಮಟಕಾ ಇದ್ದು, ಒಂದು ರೂಪಾಯಿಗೆ ರೂ.80/- ಕೊಡುವುದಾಗಿ ತಿಳಿಸಿರುತ್ತಾನೆ. ಪಂಚರ ಸಮಕ್ಷಮ ಶೋಧನಾ ಸಮುಚ್ಚಿತ ತಯ್ಯಾರಿಸಿದ ನಂತರ 11.40 ರಿಂದ 12.40 ರ ವರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ, ಮಟಕಾಕ್ಕೆ ಸಂಬಂಧಿಸಿದ ಚೀಟಿ, ಪೆನ್ನು ಮತ್ತು ಹಣವನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೊಂಡು, ಠಾಣೆಗೆ ಮರಳಿ ಚಾಸಾ-6 ರವರಿಗೆ ಮುಂದಿನ ತನಿಖೆಗಾಗಿ ಜಪ್ತಿ ಪಡಿಸಿಕೊಂಡ ಮುದ್ದೇ ಮಾಲು ಮತ್ತು ಕಡತಗಳನ್ನು ವರ್ಗಾಯಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 8 ಪ್ರಾಸಾ-03 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತನಗೆ ಜಪ್ತಿ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ತಾನು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ತನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 9 ಪ್ರಾಸಾ-03 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತನಗೆ ದೂರಿನ ಪ್ರತಿಯನ್ನು ತೋರಿಸಿದ್ದು, ತಾನು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಿದ್ದು, ತನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ತಾನು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 10 ಪ್ರಾಸಾ-03 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತನಗೆ ತೆರೆದ ನ್ಯಾಯಾಲಯದಲ್ಲಿ ಒಂದು ಖಾಕಿ ಕವರಿನ ಒಳಗಡೆ ಇರುವ ಒಂದು ಮಟಕಾ ಚೀಟಿ, ಒಂದು ಪೆನ್ನು ಮತ್ತು ರೂ.1,020/- ಗಳನ್ನು ತನಗೆ ತೋರಿಸಿದ್ದು, ತಾನು ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 3 ಎಂದು ಗುರುತಿಸಲಾಗಿರುತ್ತದೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 11 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ: 12 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಛಿಸುವಿರಾ?

ಉ:

(ಆರೋಪಿತನ ಹೇಳಿಕೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕ: 12.02.2026

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.